**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 24/2020**

**ಸಿ.ಡಬ್ಲ್ಯೂ -2, ಪಿ.ಡಬ್ಲ್ಯೂ -1**

ದಿಃ **10.09.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| **ಸಾಕ್ಷಿಯ ಹೆಸರು** | ಸಂಪತ್ ಕುಮಾರ್ |
| **ತಂದೆ/ಗಂಡನ ಹೆಸರು** | ಶ್ರೀನಿವಾಸ್ |
| **ವಯಸ್ಸು** | 40 ವರ್ಷ |
| **ಕೆಲಸ** | ಪೋಟೊಗ್ರಾಫರ್ |
| ವಾಸಸ್ಥಳ | ಬಿಳಿಕೆರೆ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರ್ ನ್ನು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು. ಸುಮಾರು 5 ವರ್ಷದ ಹಿಂದೆ ಸಂಜೆ ಸಮಯದಲ್ಲಿ ನಿಪಿ1 ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರ ಹೇಳಿಕೆ ಮೇರೆಗೆ ನಾನು ಸಹಿ ಹಾಕಿರುತ್ತೇನೆ. ನಾನು ಸಹಿ ಹಾಕುವ ಸಮಯದಲ್ಲಿ ನನ್ನೊಂದಿಗೆ ಚಾಸಾ3 ರವರು ಇದ್ದರು. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಕೈಗೊಂಡಿರುವುದಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.

ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದ

ದಿಃ 26.07.2019 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು, ಅಲ್ಲಿ ಚಾಸಾ-1 ರವರು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಸಂಜೆ 6.45 ರಿಂದ 7.45 ರವರೆಗೆ ನಿಪಿ-1 ರಂತೆ ಮಹಜರ್ ಕ್ರಮ ಕೈಗೊಂಡು, ಸ್ಥಳದಿಂದ 90 ಎಂ ಎಲ್ ಓರಿಜಿನಲ್ ವಿಸ್ಕಿ 15 ಟೆಟ್ರಾ ಪ್ಯಾಕೆಟ್ಸ್, 90 ಎಂ ಎಲ್ ಡಿಲಕ್ಸ್ ವಿಸ್ಕಿ 14 ಟೆಟ್ರಾ ಪ್ಯಾಕೆಟ್ಸ್ ಮತ್ತು ಒಂದು ಪೇಪರ್ ಬಾಕ್ಸ್

ನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ., ನಿಪಿ-1 ಕ್ಕೆ ಅಲ್ಲಿಯೇ ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಈಗ ಮೇಲೆ ಹೇಳಿದ ಹಾಗೆ ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ2 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ, ಈ ದಿನ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ನಿಜವಲ್ಲ.

**ಪಾಟೀಸವಾಲು ಆರೋಪಿ ಪರ**

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 24/2020

ಸಿ.ಡಬ್ಲ್ಯೂ -3, ಪಿ.ಡಬ್ಲ್ಯೂ -2

ದಿಃ **10.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ಸತೀಶ್ |
| **ತಂದೆ/ಗಂಡನ ಹೆಸರು** | ಮಾದೇವನಾಯಕ |
| **ವಯಸ್ಸು** | 30 ವರ್ಷ |
| **ಕೆಲಸ** | ಆಟೋ ಚಾಲಕ |
| ವಾಸಸ್ಥಳ | ಬಿಳಿಕೆರೆ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರ್ ನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು. ಸುಮಾರು 5 ವರ್ಷದ ಹಿಂದೆ ಸಂಜೆ ಸಮಯದಲ್ಲಿ ನಿಪಿ1 ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರ ಹೇಳಿಕೆ ಮೇರೆಗೆ ನಾನು ಸಹಿ ಹಾಕಿರುತ್ತೇನೆ. ನಾನು ಸಹಿ ಹಾಕುವ ಸಮಯದಲ್ಲಿ ನನ್ನೊಂದಿಗೆ ಚಾಸಾ2 ರವರು ಇದ್ದರು. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಕೈಗೊಂಡಿರುವುದಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.

ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದ

ದಿಃ 26.07.2019 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು, ಅಲ್ಲಿ ಚಾಸಾ-1 ರವರು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಸಂಜೆ 6.45 ರಿಂದ 7.45 ರವರೆಗೆ ನಿಪಿ-1 ರಂತೆ ಮಹಜರ್ ಕ್ರಮ ಕೈಗೊಂಡು, ಸ್ಥಳದಿಂದ 90 ಎಂ ಎಲ್ ಓರಿಜಿನಲ್ ವಿಸ್ಕಿ 15 ಟೆಟ್ರಾ ಪ್ಯಾಕೆಟ್ಸ್, 90 ಎಂ ಎಲ್ ಡಿಲಕ್ಸ್ ವಿಸ್ಕಿ 14 ಟೆಟ್ರಾ ಪ್ಯಾಕೆಟ್ಸ್ ಮತ್ತು ಒಂದು ಪೇಪರ್ ಬಾಕ್ಸ್

ನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ., ನಿಪಿ-1 ಕ್ಕೆ ಅಲ್ಲಿಯೇ ನನ್ನ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಈಗ ಮೇಲೆ ಹೇಳಿದ ಹಾಗೆ ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ3 ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ, ಈ ದಿನ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ನಿಜವಲ್ಲ.

**ಪಾಟೀಸವಾಲು ಆರೋಪಿ ಪರ**

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 24/2020**

**ಸಿ.ಡಬ್ಲ್ಯೂ-4, ಪಿ.ಡಬ್ಲ್ಯೂ-3**

**ದಿಃ 10.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ರವಿ ಬಿ ಪಿ |
| **ತಂದೆ/ಗಂಡನ ಹೆಸರು** | ಪುಟ್ಟೇಗೌಡ |
| **ವಯಸ್ಸು** | 40 ವರ್ಷ |
| ಕೆಲಸ | ಪೇದೆ |
| **ವಾಸಸ್ಥಳ** | ಇಲವಾಲ ಗ್ರಾಮ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ**

ನಾನು 2015 ಫೆಬ್ರವರಿ ರಿಂದ 2022 ಜೂನ್ ರವರೆಗೆ ಬಿಳಿಕೆರೆ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26.07.2019 ರಂದು ನಾನು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಂಜೆ 5 ಗಂಟೆ ಸಮಯದಲ್ಲಿ ಅಸ್ವಾಳು ಗ್ರಾಮದಿಂದ ಬಾತ್ಮಿ ಬಂದ ಮೇರೆಗೆ ಆರೋಪಿ ಗ್ರಾಮದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ತಿಳಿಸಿದ್ದು, ಸದರಿ ವಿಚಾರವನ್ನು ಚಾಸಾ1 ರವರಿಗೆ ತಿಳಿಸಿರುತ್ತೇನೆ. ನಾನು,ಚಾಸಾ1 ರಿಂದ 3, 5 ಮತ್ತು 6 ರವರು ಸೇರಿ ಇಲಾಖಾ ಜೀಪು ಅಂದರೆ ಕೆ ಎ 03 ಜಿ 947 ವಾಹನದಲ್ಲಿ ಸುಮಾರು 6.10 ಗಂಟೆಗೆ ಠಾಣೆಯನ್ನು ಬಿಟ್ಟು, 6.40 ಗಂಟೆಗೆ ಅಸ್ವಾಳು ಗ್ರಾಮಕ್ಕೆ ತಲುಪಿದೆವು. ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ, ಆರೋಪಿಯನ್ನು ಗಮನಿಸಿ ಬಾತ್ಮಿದಾರರು ಹೇಳಿದ ಅಂಗಡಿಗೆ ಹೋಗಿ ಅಲ್ಲಿ ದಾಳಿಯನ್ನು ಮಾಡಿ. ಚಾಸಾ1 ರವರು ತಪಾಸಣೆ ಮಾಡಿ ಅಲ್ಲಿ 90 ಎಂ ಎಲ್ ಓರಿಜಿನಲ್ ವಿಸ್ಕಿ 15 ಟೆಟ್ರಾ ಪ್ಯಾಕೆಟ್ಸ್, 90 ಎಂ ಎಲ್ ಡಿಲಕ್ಸ್ ವಿಸ್ಕಿ 14 ಟೆಟ್ರಾ ಪ್ಯಾಕೆಟ್ಸ್ ಮತ್ತು ಒಂದು ಪೇಪರ್ ಬಾಕ್ಸ್ ನ್ನು ಅಮಾನತ್ತುಪಡಿಸಿಕೊಂಡರು. ನಾನು ನಿಪಿ1 ಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ1(ಸಿ) ಎಂದು ಗುರುತಿಸಲಾಯಿತು. **ಸದರಿ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ** 90 ಎಂ ಎಲ್ ಓರಿಜಿನಲ್ ವಿಸ್ಕಿ 15 ಟೆಟ್ರಾ ಪ್ಯಾಕೆಟ್ಸ್, 90 ಎಂ

ಎಲ್ ಡಿಲಕ್ಸ್ ವಿಸ್ಕಿ 14 ಟೆಟ್ರಾ ಪ್ಯಾಕೆಟ್ಸ್ ನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಮು.ಮಾ-1 ರಿಂದ 29 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಆರೋಪಿ ಪರ ಶ್ರೀ ವೈ ಜಿ ವಕೀಲರಿಂದಃ</u>**

ಸಾಮಾನ್ಯವಾಗಿ ನೀವು ಎಲ್ಲಿಗಾದರೂ ಗಸ್ತಿಗೆ ಹೋದರೆ ಮುಮೆಂಟ್ ರೆಜಿಸ್ಟರ್ ನಲ್ಲಿ ನಮೂದು ಮಾಡುತ್ತೀರಿ ಎಂದರೆ ಸರಿ. ನಾನು ಅಸ್ವಾಳು ಗ್ರಾಮಕ್ಕೆ ಹೋದ ಬಗ್ಗೆ ಮುಮೆಂಟ್ ರೆಜಿಸ್ಟರ್ ನಲ್ಲಿನಮೂದು ಮಾಡಿದ್ದೇನೆ, ಮುಮೆಂಟ್ ರೆಜಿಸ್ಟರ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನಗೆ ಬಾತ್ಮಿದಾರರು ಕರೆ ಮಾಡಿ ವಿಚಾರವನ್ನು ತಿಳಿಸಿರುತ್ತಾರೆ. ನಮ್ಮ ಮೇಲಾಧಿಕಾರಿಗೆ ಬಾತ್ಮಿದಾರರು ಕರೆ ಮಾಡಿ ವಿಚಾರವನ್ನು ತಿಳಿಸಿದ್ದ ಬಗ್ಗೆ ಹೇಳಿರುವುದಿಲ್ಲ. ಗಾಗೇನಹಳ್ಳಿ, ಚಲ್ಲಹಳ್ಳಿ, ಬೆಂಕಿಪುರ ಮಾರ್ಗವಾಗಿ ಅಸ್ವಾಳು ಗ್ರಾಮಕ್ಕೆ ಹೋಗಿರುತ್ತೇವೆ. ಬಿಳಿಕೆರೆಯಿಂದ ಅಸ್ವಾಳು ಗ್ರಾಮಕ್ಕೆ ಈ ಮಾರ್ಗದಲ್ಲಿ ಹೋದರೆ ಸುಮಾರು 25 ಕಿ ಮೀ ದೂರವಾಗುತ್ತದೆ. ನೀವು ಹೇಳುವ ಹಾಗೆ 25 ಕಿ ಮೀ ಆಗುವುದಿಲ್ಲ 40 ಕಿ ಮೀ ಆಗುತ್ತದೆ ಎಂದರೆ ಸರಿಯಲ್ಲ. ನೀವು ಹೇಳುವ ಸ್ಥಳ ಗ್ರಾಮಸ್ಥರು ಹಾಗೂ ಹೆಚ್ಚಿನ ಜನ ಇರುವ ಜಾಗ ಎಂದರೆ ಸರಿ. ನೀವು ಯಾವುದೇ ಪಂಚರನ್ನು ಕರೆದುಕೊಂಡು ಹೋಗಿರುವುದಿಲ್ಲ ಹಾಗೂ ಯಾವುದೇ ಮಹಜರ್ ನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಮುದ್ದೆ ಮಾಲುಗಳನ್ನು ಅಮಾನತ್ತುಪಡಿಸಿಕೊಂಡು ಠಾಣೆಗೆ ಬಂದೆವು ಎಂದರೆ ಸರಿ. ನೀವು ಮುದ್ದೆ ಮಾಲುಗಳನ್ನು ಅಮಾನತ್ತುಪಡಿಸಿಕೊಂಡು ನಂತರ ಪ್ರ.ವ.ವರದಿಯನ್ನು ದಾಖಲಿಸಿದ್ದೀರಿ ಎಂದರೆ ಸಾಕ್ಷಿ ನಾವು ನ್ಯಾಯಾಲಯದಿಂದ ಅನುಮತಿಯನ್ನು ಪಡೆದಿದ್ದೇವು. ಅನುಮತಿಯನ್ನು ಪಡೆದ ದಾಖಲಾತಿ ಬಗ್ಗೆ ಚಾಸಾ1 ರವರಿಗೆ ಗೊತ್ತು, ನನಗೆ ಗೊತ್ತಿಲ್ಲ. ಮು ಮಾ 1 ರಿಂದ 29 ತರಹದ ವಸ್ತುಗಳು ಠಾಣೆಯಲ್ಲಿ ಬೇರೆ ಪ್ರಕರಣಕ್ಕೆ ಸೇರಿರುವುದು ಇರುತ್ತದೆ ಎಂದರೆ ಸರಿ. ಆರೋಪಿ ಯಾವುದೇ ಅಕ್ರಮ ಮಧ್ಯವನ್ನು ಮಾರಾಟ ಮಾಡಿಲ್ಲ, ಸುಳ್ಳು ಪ್ರಕರಣವನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಠಾಣೆಯಲ್ಲಿ ಬರೆದಿದ್ದೀರಿ ಎಂದರೆ ಸರಿಯಲ್ಲ.

**ಸಿ.ಸಿ. 24/2020**

ಸಿ.ಡಬ್ಲ್ಯೂ **-4,** ಪಿ.ಡಬ್ಲ್ಯೂ **-3**

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು